**2.2 Number of seats earmarked for reserved category as per GOI/ State Govt rule year wise during last five years**

| year | Number of seats earmarked for reserved category as per GOI/ State Govt rule | | | | | | | | | | |
|---|---|---|---|---|---|---|---|---|---|---|---|
| | Programs | No. of sanctioned strength | | No. of seats Earmarked for SC/ST/OBC category | | No. of actual Students enrolled | | No. of seats Earmarked for SC/ST/OBC students among Enrolled students | | No. of SC/ST/CAT-1 category students admitted | |
| Year 1-2015-16 | B A | 200 | 525 | 100 | 263 | 60 | 227 | 30 | 114 | 25 | 79 |
| | B.Sc | 165 | | 83 | | 58 | | 29 | | 18 | |
| | B.Com | 100 | | 50 | | 74 | | 37 | | 24 | |
| | M.Com | 60 | | 30 | | 35 | | 18 | | 12 | |
| Year 2-2016-17 | B A | 260 | 615 | 130 | 308 | 61 | 281 | 31 | 141 | 33 | 112 |
| | B.Sc | 195 | | 98 | | 78 | | 39 | | 36 | |
| | B.Com | 100 | | 50 | | 96 | | 48 | | 30 | |
| | M.Com | 60 | | 30 | | 46 | | 23 | | 13 | |
| Year 3-2017-18 | B A | 200 | 510 | 100 | 255 | 59 | 278 | 30 | 139 | 39 | 113 |
| | B.Sc | 150 | | 75 | | 77 | | 38 | | 28 | |
| | B.Com | 100 | | 50 | | 95 | | 47 | | 30 | |
| | M.Com | 60 | | 30 | | 47 | | 24 | | 16 | |
| Year 4-2018-19 | B A | 200 | 570 | 100 | 285 | 73 | 329 | 37 | 165 | 38 | 136 |
| | B.Sc | 210 | | 105 | | 102 | | 51 | | 38 | |
| | B.Com | 100 | | 50 | | 96 | | 48 | | 38 | |
| | M.Com | 60 | | 30 | | 58 | | 29 | | 22 | |
| Year 5-2019-20 | B A | 200 | 510 | 100 | 255 | 68 | 254 | 34 | 127 | 50 | 121 |
| | B.Sc | 150 | | 75 | | 74 | | 37 | | 30 | |
| | B.Com | 100 | | 50 | | 95 | | 48 | | 33 | |
| | M.Com | 60 | | 30 | | 17 | | 8 | | 8 | |

PRINCIPAL
Sri Siddhartha First Grade College
TUMAKURU - 572 105.

Scanned with CamScanner

ಕರ್ನಾಟಕ ಸರ್ಕಾರ

ಸಂಖ್ಯೆ ಕಾಶಿಇ: 209 :ಶೈವಿ:ಪ್ರವೇಶ: 2002-03

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-1, ದಿನಾಂಕ: 09-01-2003

## ಸುತ್ತೋಲೆ

ವಿಷಯ:- ಕರ್ನಾಟಕ ರಾಜ್ಯದ ಪದವಿ ಕಾಲೇಜುಗಳಲ್ಲಿ ಪ್ರಥಮ ಪದವಿ ತರಗತಿಗಳ ಪ್ರವೇಶದಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಬಗ್ಗೆ.

- - - o - - -

ಪದವಿ ಕಾಲೇಜುಗಳಲ್ಲಿ ಪ್ರಥಮ ವರ್ಷದ ತರಗತಿಗಳಿಗೆ ಪ್ರವೇಶದಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಸದುದ್ದೇಶದಿಂದ ಈ ಕಳಕಂಡ ಮಾರ್ಗಸೂಚಿಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ಸುಪ್ರೀಮ್ ಕೋರ್ಟಿನ ತೀರ್ಪಿನ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ. ಇದನ್ನು 2003-2004ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ವರ್ಷದ ಪದವಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವಾಗ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನಿತ ಅಲ್ಪಸಂಖ್ಯಾತ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

1. ತಮ್ಮ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಲಭ್ಯವಿರುವ ಒಟ್ಟು ಪ್ರವೇಶಗಳ ಸಂಖ್ಯೆಯನ್ನು ಸೂಚನಾಫಲಕದ ಮೇಲೆ / ವೆಬ್‌ಸೈಟ್‌ನಲ್ಲಿ ದಾಖಲಾತಿ ಪ್ರಕ್ರಿಯೆ ಪ್ರಾರಂಭವಾಗುವ ಮಾದಲು ಪ್ರಕಟಿಸಬೇಕು. ಈ ಪ್ರವೇಶ ಸಂಖ್ಯೆಯನ್ನು ಸಂಯೋಜನೆವಾರು ರೋಸ್ಟರ್ ಪದ್ಧತಿ ಪ್ರಕಾರ ಪ್ರಕಟಿಸಬೇಕು. ಪ್ರತಿ ಸಂಯೋಜನೆಯಲ್ಲಿ ಎಷ್ಟು ವರ್ಗಗಳು **(Sections)** ಇರುತ್ತವೆ ಎಂಬುದನ್ನು ನಮೂದಿಸಬೇಕು. ಈ ರೀತಿಯಲ್ಲಿ ಪ್ರಕಟಿಸಿರುವ ಸಂಯೋಜನೆಗಳಿಗೆ / ವರ್ಗಗಳಿಗೆ ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆದಿರಬೇಕು. ಆಯಾ ವಿಶ್ವವಿದ್ಯಾನಿಲಯ ನಿಗದಿ ಪಡಿಸಿದ ಪ್ರಕಾರ ವಿದ್ಯಾರ್ಥಿಗಳನ್ನು ಮಾತ್ರ ದಾಖಲಾತಿ ಮಾಡಿಕೊಳ್ಳಬೇಕು. ಸೂಚನಾಫಲಕದ ಮೇಲೆ ಪ್ರಕಟಿಸಬಹುದಾದ ಮಾಹಿತಿಗೆ ಒಂದು ಉದಾಹರಣೆ ಕೊಡಲಾಗಿದೆ.

ಉದಾ:- ಖಾಸಗಿ ಅನುದಾನಿತ ಕಾಲೇಜು

| | | | |
|---|---|---|---|
| ಕಾಲೇಜಿನಲ್ಲಿ ಲಭ್ಯವಿರುವ ಒಟ್ಟು ಪ್ರವೇಶಗಳು - | | - | 600 |
| ವಿಭಾಗವಾರು/ಸಂಯೊಜನೆವಾರು ಲಭ್ಯವಿರುವ ಪ್ರವೇಶಗಳು - | ವಿಜ್ಞಾನ ವಿಭಾಗ | - | 200 |
| | ವಾಣಿಜ್ಯ ವಿಭಾಗ | - | 100 |
| | ಕಲಾ ವಿಭಾಗ | - | 300 |

PRINCIPAL
Sri Siddhartha First Grade College
TUMAKURU - 572 105.

Scanned with CamScanner

ವಿಭಾಗವಾರು ಲಭ್ಯವಿರುವ ಪ್ರವೇಶಗಳು

| | ಶೇಕಡ | ಬಿ.ಎಸ್ಸಿ | ಬಿ.ಕಾಂ | ಬಿ.ಎ. |
|---|---|---|---|---|
| ಶಿಕ್ಷಣ ಸಂಸ್ಥೆಗೆ ಬಿಡಲಾದ ಪ್ರವೇಶಗಳ ಸಂಖ್ಯೆ: | 20 | 40 | 20 | 60 |
| ಮೆರಿಟ್ ಆಧಾರದ ಮೇಲೆ ಹಂಚಿಕೆಯಾಗುವ ಒಟ್ಟು ಪ್ರವೇಶಗಳ ಸಂಖ್ಯೆ | 80 | 160 | 80 | 240 |

| | ಮೀಸಲಾತಿ ಪ್ರಮಾಣ | ಲಭ್ಯವಿರುವ ಒಟ್ಟು ಪ್ರವೇಶಗಳ ಸಂಖ್ಯೆ | | |
|---|---|---|---|---|
| | ಶೇಕಡ | ಬಿ.ಎಸ್ಸಿ | ಬಿ.ಕಾಂ | ಬಿ.ಎ. |
| | 100% | 200 | 100 | 300 |
| ಪ್ರವರ್ಗ: | | | | |
| ಸಾಮಾನ್ಯ ವರ್ಗ - | 50 | 100 | 50 | 150 |
| ಪರಿಶಿಷ್ಟ ಜಾತಿ - | 15 | 30 | 15 | 45 |
| ಪರಿಶಿಷ್ಟ ಪಂಗಡ - | 03 | 06 | 03 | 09 |
| ವರ್ಗ - 1 - | 04 | 08 | 04 | 12 |
| ವರ್ಗ - 2ಎ - | 15 | 30 | 15 | 45 |
| ವರ್ಗ - 2ಬಿ - | 04 | 08 | 04 | 12 |
| ವರ್ಗ - 3ಎ - | 04 | 08 | 04 | 12 |
| ವರ್ಗ - 3ಬಿ - | 05 | 10 | 05 | 15 |

1. ಕಾಲೇಜಿನಲ್ಲಿ ಭೋಧನೆ ಮಾಡುವ ಸಂಯೋಜನೆಗಳು ಹಾಗೂ ಪ್ರತಿ ಸಂಯೋಜನೆಯಲ್ಲಿರುವ ವಿಷಯಗಳು ವಿಶ್ವವಿದ್ಯಾನಿಲಯ ನಿಗಧಿಪಡಿಸಿರುವ ಪಠ್ಯಕ್ರಮದಲ್ಲಿರುವ ಸಂಯೋಜನೆಗಳ ಗುಂಪಿನಲ್ಲಿರಬೇಕು. ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಸರ್ಕಾರಿ ಪದವಿ ಕಾಲೇಜಿನಲ್ಲಿ ಹೊಸದಾಗಿ ವಿಷಯವನ್ನಾಗಲಿ ಅಥವಾ ಸಂಯೋಜನೆಯನ್ನಾಗಲಿ ಪ್ರಾರಂಭಿಸಬಾರದು ಹಾಗೂ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಬಾರದು. ಇಲಾಖೆಯ ಲಿಖಿತ ಪೂರ್ವಾನುಮತಿ ಇಲ್ಲದೇ ಕಾಲೇಜಿನ ಹೆಚ್ಚುವರಿ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡುವ ದೃಷ್ಟಿಯಿಂದ ಮಾಧ್ಯಮವಾರು (Medium wise) ತರಗತಿಗಳನ್ನು ಪ್ರಾರಂಭಿಸಬಾರದು.
2. ಪ್ರಥಮ ಪದವಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಆಯಾ ವಿಶ್ವವಿದ್ಯಾನಿಲಯಗಳ ವೇಳಾಪಟ್ಟಿಯನ್ನು ಅನುಸರಿಸಬೇಕು. ದಾಖಲಾತಿಯ ಪೂರ್ಣ ವೇಳಾಪಟ್ಟಿಯನ್ನು (Calendar of events for admission) ಕಾಲೇಜಿನಲ್ಲಿ ಪ್ರಮುಖವಾದ ಸ್ಥಳದಲ್ಲಿ ಪೋಷಕರ/ವಿದ್ಯಾರ್ಥಿಗಳ ಗಮನಕ್ಕಾಗಿ ಕಡ್ಡಾಯವಾಗಿ ಪ್ರಕಟಿಸಬೇಕು.

Scanned with CamScanner

1. ಪಿ ಯು ಸಿ ಪರೀಕ್ಷಾ ಫಲಿತಾಂಶ ಪ್ರಕಟವಾದ ಮಾರನೇ ದಿವಸದಿಂದ ಕನಿಷ್ಠ ಐದು ದಿನಗಳ ಕಾಲ ಪ್ರವೇಶ ಅರ್ಜಿಗಳು ವಿದ್ಯಾರ್ಥಿಗಳಿಗೆ ದೊರಕುವಂತೆ ಏರ್ಪಾಡು ಮಾಡಬೇಕು. (ಅರ್ಜಿಗಳಿಗೆ ಕ್ರಮ ಸಂಖ್ಯೆಯಿರಬೇಕು) ಪ್ರತಿ ದಿವಸ ಕನಿಷ್ಠ ನಾಲ್ಕು ಗಂಟೆಗಳ ಕಾಲ ಪ್ರವೇಶ ಅರ್ಜಿಗಳು ದೊರಕಲು ವ್ಯವಸ್ಥೆ ಮಾಡಬೇಕು. ಯಾವ ಸಮಯದಲ್ಲಿ ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ಕೊಡಲಾಗುವುದು ಎಂಬುದನ್ನು ಪೂರ್ವಭಾವಿಯಾಗಿ ಸೂಚನಾಫಲಕ/ಕಪ್ಪು ಹಲಗೆಯ ಮೇಲೆ ಪ್ರಕಟಿಸಬೇಕು. ಅವಶ್ಯಕತೆ ಕಂಡುಬಂದಲ್ಲಿ ಹೆಚ್ಚಿನ ಕೌಂಟರ್ಸ್ ತೆಗೆದು ಅರ್ಜಿಗಳು ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರಕುವಂತೆ ಏರ್ಪಾಡು ಮಾಡಬೇಕು.

2. ಪ್ರವೇಶ ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ವೇಳಾಪಟ್ಟಿಯಂತೆ ಕೊನೆಯ ದಿನಾಂಕವಾದ ನಂತರ ಮೂರು ದಿವಸಗಳ ಸಮಯವನ್ನು ವಿದ್ಯಾರ್ಥಿಗಳಿಂದ ಭರ್ತಿ ಮಾಡಿದ ಅರ್ಜಿಗಳನ್ನು ಹಿಂದಕ್ಕೆ ಪಡೆಯಲು ಕೊನೆಯ ದಿನಾಂಕದೊಳಗಾಗಿ ಕೊಡಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ವಿದ್ಯಾರ್ಥಿಗಳಿಂದ ಪಡೆಯಲು ಪ್ರತ್ಯೇಕ ಕೌಂಟರ್ಸ್ ತೆಗೆಯಬೇಕು. ಪ್ರತಿದಿವಸ ಕನಿಷ್ಠ ನಾಲ್ಕು ಗಂಟೆಗಳ ಸಮಯ ಈ ಕೌಂಟರ್ಸ್ ತೆಗೆದಿರಬೇಕು. ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಪ್ರಾರಂಭ ಮಾಡಿದ ಮಾರನೆಯ ದಿವಸದಿಂದ ಭರ್ತಿ ಮಾಡಿದ ಅರ್ಜಿಗಳನ್ನು ವಿದ್ಯಾರ್ಥಿಗಳಿಂದ ಹಿಂದಕ್ಕೆ ಪಡೆಯಬಹುದು.

3. ಪ್ರತಿ ದಿವಸ ಎಷ್ಟು ಅರ್ಜಿಗಳನ್ನು ಮಾರಾಟ ಮಾಡಲಾಯಿತು ಎಂಬುದಕ್ಕೆ ಲೆಕ್ಕ ಇಡಬೇಕು. ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ಕೊಡುವಾಗಲೇ ಗಣಕೀಕರಣ ಮಾಡಿಕೊಂಡಲ್ಲಿ ಮುಂದೆ ಅವಶ್ಯವಾದ ಮಾಹಿತಿಯನ್ನು ಸೇರಿಸಲು ಸುಲಭವಾಗುತ್ತದೆ. ದಾಖಲಾತಿ ಪ್ರಕ್ರಿಯೆಯ ಕೊನೆಯಲ್ಲಿ ಕೋರ್ಸುವಾರು, ಕಾಂಬಿನೇಷನ್‌ವಾರು ಒಟ್ಟು ದಾಖಲಾದ ಅಂಕಿ ಅಂಶಗಳನ್ನು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಜುಲೈ ಮೊದಲನೇ ವಾರದಲ್ಲಿ ಕಳುಹಿಸಿಕೊಡಬೇಕು.

4. ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ಸ್ವೀಕೃತಿ ಪತ್ರ ನೀಡಬೇಕು. ಪ್ರಥಮ ಪದವಿ ತರಗತಿಗಳಿಗೆ ಕಾಲೇಜಿನಲ್ಲಿ ಪ್ರವೇಶಕ್ಕೆ ಅರ್ಜಿಗಳನ್ನು ಹಾಕಿದ ಅರ್ಹ ವಿದ್ಯಾರ್ಥಿಗಳ ಪೂರ್ಣ ಪಟ್ಟಿಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1995 (ದಿ ಕರ್ನಾಟಕ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಕ್ಲಾಸಿಫಿಕೇಷನ್, ರೆಗುಲೇಷನ್ ಮತ್ತು ಪ್ರಿಸ್‌ಕ್ರಿಪ್ಷನ್ ಆಫ್ ಕ್ಯಾರಿಕ್ಯುಲಾ ಎಕ್ಸ್ಟ್ರಾ ನಿಯಮಗಳು 1995) ನಿಯಮ 14 (11)ರ ಪ್ರಕಾರ ಸಂಯೋಜನೆವಾರು ಪ್ರಕಟಿಸಬೇಕು. ಪದವಿ ತರಗತಿಗಳಿಗೆ ಸೇರಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿ ಹಾಕಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳ ತಿರಸ್ಕೃತ ಪಟ್ಟಿಯನ್ನು ಪ್ರಕಟಿಸಬೇಕು. ಈ ಎರಡು ಪಟ್ಟಿಗಳನ್ನು (ಅರ್ಹಪಟ್ಟಿ

PRINCIPAL
Sri Siddhartha First Grade College
TUMAKURU - 572 105.

Scanned with CamScanner

ಮತ್ತು ತಿರಸ್ಕೃತ ಪಟ್ಟಿ) ಪ್ರಕಟಿಸಿದ ಮೇಲೆ ಇದರ ಬಗ್ಗೆ ಏನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಐದು ದಿವಸದೊಳಗೆ ಅರ್ಜಿಯನ್ನು ಹಾಕಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕು.

ಪ್ರವೇಶಗಳನ್ನು ಹಂಚುವ ವಿಧಾನ:-

5.ಅ) ಸರ್ಕಾರಿ ಪದವಿ ಕಾಲೇಜಿನಲ್ಲಿ ಲಭ್ಯವಿರುವ ಎಲ್ಲ ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಹಂಚಿಕೆ ಮಾಡಬೇಕು.

ಆ) ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಲಭ್ಯವಿರುವ ಪ್ರವೇಶಗಳಲ್ಲಿ ನಿಯಮ 12(ಬಿ) ಪ್ರಕಾರ ಸಂಯೋಜನೆವಾರು ಶೇಕಡ 20 ಪ್ರವೇಶಗಳನ್ನು ಹಂಚಲು ಸಂಸ್ಥೆಯವರಿಗೆ ಬಿಡಲಾಗಿದೆ. ಆದರೆ ಸಾಧ್ಯವಾದಷ್ಟು ಮಟ್ಟಿಗೆ ರೋಸ್ಟರ್ ಪದ್ಧತಿಯಂತೆ ಪ್ರವೇಶ ನಿರ್ವಹಿಸತಕ್ಕದ್ದು..

ಇನ್ನುಳಿದ ಶೇಕಡ 80 ಪ್ರವೇಶಗಳನ್ನು ಸಂಯೋಜನೆವಾರ ಮೀಸಲಾತಿ ಪದ್ಧತಿಯಂತೆ ಮತ್ತು ಕೇವಲ ಮೆರಿಟ್ ಆಧಾರದ ಮೇಲೆ ಹಂಚಿಕೆ ಮಾಡಬೇಕು.

ಇ) ಅಲ್ಪಸಂಖ್ಯಾತ ಅನುದಾನಿತ ಸಂಸ್ಥೆಯವರು ನಡೆಸುತ್ತಿರುವ ಕಾಲೇಜುಗಳಲ್ಲಿ ಒಟ್ಟು ಲಭ್ಯವಿರುವ ಪ್ರವೇಶಗಳಲ್ಲಿ ಶೇಕಡ 50 ಪ್ರವೇಶಗಳನ್ನು ತಮ್ಮದೇ ಆದ ಜನಾಂಗದ (ಕಮ್ಯೂನಿಟಿ) ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲು ಸಂಸ್ಥೆಯವರಿಗೆ ಬಿಡಲಾಗಿದೆ. ಇನ್ನುಳಿದ 50 ಪ್ರವೇಶಗಳನ್ನು ನಿಯಮಾವಳಿ 14ರ ಉಪನಿಯಮಾವಳಿ 05 ಮತ್ತು 06ರಂತೆ ರೋಸ್ಟರ್ ಪದ್ಧತಿಯಂತೆ ಮೆರಿಟ್ ಮೇಲೆ ಪ್ರವೇಶಗಳನ್ನು ಹಂಚಬೇಕು. ಹೀಗೆ ಪ್ರವೇಶಗಳನ್ನು ಕೊಟ್ಟ ಎರಡು ಪಟ್ಟಿಗಳನ್ನು ಪ್ರತ್ಯೇಕವಾಗಿ ಪ್ರಕಟಿಸಬೇಕು. ಖಾಸಗಿ ಅನುದಾನಿತ ಕಾಲೇಜುಗಳಿಗೆ ನಿಯಮ 12(ಬಿ) ಪ್ರಕಾರ ಲಭ್ಯವಿರುವ ಶೇಕಡ 20 (ಸಂಸ್ಥೆಯವರು ಮಾಡಬಹುದಾದ) ಪ್ರವೇಶವನ್ನು ನೀಡುವಾಗ ಸದರಿ ಪ್ರವೇಶದಲ್ಲಿಯೂ ಸಹ ಆದಷ್ಟು ಮಟ್ಟಿಗೆ ಅರ್ಧದಷ್ಟು ಪ್ರವೇಶ ಸೀಟುಗಳನ್ನು ತನ್ನದೇ ಆದ ಅಲ್ಪಸಂಖ್ಯಾತ ಪಂಗಡಕ್ಕೂ ಹಾಗೂ ಇನ್ನೂಳಿದ ಅರ್ಧದಷ್ಟು ಪ್ರವೇಶ ಸೀಟುಗಳನ್ನು ಆದಷ್ಟು ಮಟ್ಟಿಗೆ ಸರ್ಕಾರ ನಿಗದಿ ಪಡಿಸಿರುವ ಮೀಸಲಾತಿ ಪದ್ಧತಿಯಂತೆ ಪ್ರವೇಶ ನೀಡುವ ವ್ಯವಸ್ಥೆ ಮಾಡತಕ್ಕದ್ದು.

ಮೇಲೆ ತಿಳಿಸಿರುವ Calendar of events ಮುಗಿದ ನಂತರವೂ ಕೂಡ ಕಾಲೇಜುಗಳಲ್ಲಿ ಪ್ರವೇಶ ಉಳಿದಿದ್ದ ಪಕ್ಷದಲ್ಲಿ ಆ ದಿನಾಂಕಗಳ ನಂತರವೂ ಕೂಡ ಅರ್ಜಿಯನ್ನು ಕೊಟ್ಟು ಪ್ರವೇಶಗಳನ್ನು ತುಂಬಲು ಅವಕಾಶ ಮಾಡಿಕೊಡಲಾಗಿದೆ. ವಿಶ್ವವಿದ್ಯಾನಿಲಯ ನಿರ್ಧರಿಸುವ ಪ್ರಥಮ ಪದವಿ ತರಗತಿಗಳಿಗೆ ದಾಖಲಾತಿಗೆ ಕೊನೆಯ ದಿನಾಂಕದೊಳಗೆ ದಾಖಲಾತಿ ಮಾಡಲು ಅನುಮತಿ ಇರುತ್ತದೆ.

PRINCIPAL
Sri Siddhartha First Grade College
TUMAKURU - 572 105.

Scanned with CamScanner

ರೋಸ್ಟರ್ ಹಂಚಿಕೆ:-

1. ಸಹ ಶಿಕ್ಷಣ (Co-Education) ಸಂಸ್ಥೆಗಳಲ್ಲಿ ಪ್ರವೇಶಗಳಲ್ಲಿ ಶೇಕಡ 50 ಪ್ರವೇಶಗಳು ನಿಯಮ 14 (6)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು. ಈ ವಿದ್ಯಾರ್ಥಿನಿಯರಲ್ಲಿ ಮತ್ತೆ ರೋಸ್ಟರ್ ಪದ್ಧತಿ ಅನುಸರಿಸಬೇಕು. ಶೇಕಡ 50 ವಿದ್ಯಾರ್ಥಿನಿಯರು ಅರ್ಜಿಗಳನ್ನು ಹಾಕದಿದ್ದ ಪಕ್ಷದಲ್ಲಿ ಆ ಪ್ರವೇಶಗಳನ್ನು ವಿದ್ಯಾರ್ಥಿಗಳಿಗೆ (ಬಾಲಕರಿಗೆ) ರೋಸ್ಟರ್ ಅನುಗುಣವಾಗಿ ಕೊಡಬಹುದು.

2. ಲಭ್ಯವಿರುವ ಒಟ್ಟು ಪ್ರವೇಶಗಳಲ್ಲಿ ಶೇಕಡ 05 ಪ್ರವೇಶಗಳನ್ನು ಅಂಗವಿಕಲ ಅಧಿನಿಯಮ 1995ರ ಪರಿಚ್ಛೇದ 39ರ ಪ್ರಕಾರ ಅಂಗವಿಕಲರಿಗೆ ಮೀಸಲಿಡಬೇಕು.

3. ಸರ್ಕಾರ ನಿಗಧಿಪಡಿಸಿರುವಂತೆ ಹಾಗೂ ಕಾಲ ಕಾಲಕ್ಕೆ ನಿಗಧಿಪಡಿಸುವಂತೆ ನಿಯಮ 14(5)ರ ಪ್ರಕಾರ ಪರಿಶಿಷ್ಟ ಜಾ ತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗಗಳು/ ವರ್ಗ-1, 2ಎ, 2ಬಿ, 3ಎ, 3ಬಿ, ವಿದ್ಯಾರ್ಥಿಗಳಿಗೆ ಪ್ರವೇಶಗಳನ್ನು ಮೀಸಲಾಗಿಡುವುದು.

4. ವಿವಿಧ ವರ್ಗಗಳಲ್ಲಿ ಸಂಬಂಧಿಸಿದ ವಿದ್ಯಾರ್ಥಿಗಳು ಅರ್ಜಿಯನ್ನು ಹಾಕದಿದ್ದಲ್ಲಿ ಅಂತಹ ಪ್ರವೇಶಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾಯಿಸುವುದು. ಯಾವುದೇ ಕಾರಣಕ್ಕೆ ಮೀಸಲಾತಿ ವರ್ಗದವರಿಂದ ಬಂದಿರುವ ಅರ್ಜಿಗಳನ್ನು **exhaust** ಮಾಡದೆ ಸಾಮಾನ್ಯ ವರ್ಗಕ್ಕೆ ವರ್ಗಾಯಿಸಕೊಡದು.

ಮೆರಿಟ್ ಆಧಾರದ ಪ್ರವೇಶ ಪಟ್ಟಿ ತಯಾರಿಕೆ:-

ಮೊಟ್ಟಮೊದಲು ಮೀಸಲಾತಿಗೆ ಒಳಪಟ್ಟಿರುವ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ಪ್ರವೇಶಗಳನ್ನು ತುಂಬಬೇಕು. ನಂತರ ಈ ಮೇಲೆ ತಿಳಿಸಿರುವ ಮೀಸಲಾತಿ ಪದ್ಧತಿಯ ಆಧಾರದ ಮೇಲೆ ಲಭ್ಯವಿರುವ ಪ್ರವೇಶಗಳಲ್ಲಿ ಯಾವ ಯಾವ ಗುಂಪಿಗೆ ಎಷ್ಟು ಪ್ರವೇಶಗಳನ್ನು ಹಂಚಬೇಕು ಎಂದು ನಿರ್ಧರಿಸಿದ ನಂತರ ಆಯಾ ಪಂಗಡಗಳ ವಿದ್ಯಾರ್ಥಿಗಳ ಅರ್ಜಿಯನ್ನು ಇದೇ ಆಧಾರದ ಮೇಲೆ ಜೋಡಿಸಿಕೊಂಡು ಅವರಲ್ಲಿ ಮೆರಿಟ್ ಆಧಾರದ ಮೇಲೆ ಜೋಡಿಸಿಕೊಂಡು ಅವರಲ್ಲಿ ಮೆರಿಟ್ ಆಧಾರದ ಮೇಲೆ (ವಿದ್ಯಾರ್ಥಿಗಳು ಪಿಯುಸಿ ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ಪ್ರವೇಶಗಳನ್ನು) ಹಂಚಬೇಕು. ಕಾಲೇಜಿನವರು ಪ್ರಥಮ ಪಟ್ಟಿ ದ್ವಿತೀಯ ಪಟ್ಟಿ ತೃತೀಯ ಪಟ್ಟಿ ಮತ್ತು ಅವಶ್ಯ ಬಿದ್ದಲ್ಲಿ ಹೆಚ್ಚುವರಿ ಪಟ್ಟಿಗಳನ್ನು ಉಪನಿಯಮ 11 ಮತ್ತು 12ಎ ಪ್ರಕಾರ ಪ್ರಕಟಿಸಬೇಕು. ಪಟ್ಟಿಗಳನ್ನು ಪ್ರಕಟಿಸುವ ದಿನಾಂಕಗಳು ಕೆಳಕಂಡ ಅವಧಿಗಳನ್ನು ಹೊಂದಿರಬೇಕು.

ಆಯ್ಕೆಯಾದ ವಿದ್ಯಾರ್ಥಿಗಳ ಪ್ರಥಮ ಪಟ್ಟಿಯನ್ನು ಉಪನಿಯಮ 12ಎ ಪ್ರಕಾರ ಪ್ರಕಟಿಸಿದ ನಂತರ ಆ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಕಟ್ಟಲು ಮೂರು ದಿವಸಗಳ ಸಮಯ ಕೊಡಬೇಕು. ಆ ದಿವಸದ ನಂತರ ಪ್ರಕಟಿಸಿದ ಪ್ರಥಮ

Scanned with CamScanner

ಪಟ್ಟಿಯಲ್ಲಿ ಎಷ್ಟು ವಿದ್ಯಾರ್ಥಿಗಳು ಶುಲ್ಕ ಕಟ್ಟಿದ್ದಾರೆ ಎಂಬುದನ್ನು ಖಾತರಿಪಡಿಸಿಕೊಂಡು ಇನ್ನುಳಿದ ಪ್ರವೇಶಗಳಿಗೆ ದ್ವಿತೀಯ ಪಟ್ಟಿಯನ್ನು ಪ್ರಥಮ ಪಟ್ಟಿ ಪ್ರಕಟಿಸಿದ ಐದನೇ ದಿವಸ ಪ್ರಕಟಿಸಬೇಕು. ಈ ದ್ವಿತೀಯ ಆಯ್ಕೆಗೊಂಡ ಪಟ್ಟಿಯ ವಿದಾರ್ಥಿಗಳಿಗೂ ಸಹ ಶುಲ್ಕ ಕಟ್ಟಲು ಮೂರು ದಿವಸ ಸಮಯ ಕೊಡಬೇಕು. ದ್ವಿತೀಯ ಪಟ್ಟಿ ಪ್ರಕಟಿಸಿದ ಐದು ದಿವಸಗಳ ನಂತರ ತೃತೀಯ ಆಯ್ಕೆಗೊಂಡ ಪಟ್ಟಿಯನ್ನು ಪ್ರಕಟಿಸಬೇಕು. ಅವರಿಗೂ ಸಹ ಶುಲ್ಕ ಕಟ್ಟಲು ಮೂರು ದಿವಸ ಸಮಯ ಕೊಡಬೇಕು. ಅವಶ್ಯಕತೆ ಬಿದ್ದಲ್ಲಿ ಕೊನೆಯದಾಗಿ ಆಯ್ಕೆಗೊಂಡ ಹೆಚ್ಚುವರಿ ಪಟ್ಟಿಯನ್ನು ತೃತೀಯ ಪಟ್ಟಿ ಪ್ರಕಟಿಸಿದ ಐದು ದಿವಸಗಳ ನಂತರ ಪ್ರಕಟಿಸಬೇಕು. ಯಾವುದೇ ಕಾರಣಕ್ಕೆ ಆಯ್ಕೆಗೊಂಡ ನಾಲ್ಕು ಪಟ್ಟಿಗಳಲ್ಲಿ ಇಲ್ಲದೆ ಹೆಸರುಗಳನ್ನು ಪ್ರಥಮ ಪದವಿ ತರಗತಿಗೆ ದಾಖಲಾತಿ ಮಾಡಿಕೊಳ್ಳಕೂಡದು. ಸಂಸ್ಥೆಯವರಿಗೆ ಬಿಡಲಾದ ಪ್ರವೇಶಗಳಲ್ಲಿ ಸಹ ವಿದ್ಯಾರ್ಥಿಗಳ ಪಟ್ಟಿಯನ್ನು ಹಾಕುವುದು.

ಪ್ರತಿ ಆಯ್ಕೆಗೊಂಡ ಪಟ್ಟಿಯಲ್ಲಿ ವಿದ್ಯಾರ್ಥಿಗಳು ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳನ್ನು ಮತ್ತು ಶೇಕಡವಾರು ಅಂಕಗಳನ್ನು ನಮೂದಿಸಬೇಕು. ಯಾವುದೇ ಕಾರಣಕ್ಕೆ ಕೆಲವು ವಿಷಯಗಳ ಅಂಕಗಳನ್ನು ಮಾತ್ರ ಪರಿಗಣನೆ ಮಾಡಬಾರದು. ಪ್ರತಿ ಪಟ್ಟಿಯನ್ನು ಪ್ರಕಟಿಸಿದಾಗ ವಿವಿಧ ವರ್ಗಗಳಲ್ಲಿ ಸಂಯೋಜನೆವಾರು ಕೊನೆಯ ಪ್ರವೇಶವನ್ನು ಪಡೆದ ವಿದ್ಯಾರ್ಥಿಯ ಒಟ್ಟು ಅಂಕಗಳನ್ನು ಮತ್ತು ಶೇಕಡವಾರು ಅಂಕಗಳನ್ನು ( **Cut of point** ) ಸೂಚನಾ ಫಲಕದ ಮೇಲೆ ಪ್ರಕಟಿಸಬೇಕು.

ಪ್ರಕಟಿಸಿದ ಆಯ್ಕೆಗೊಂಡ ಪಟ್ಟಿಗಳು ಮತ್ತು ದಾಖಲಾದ ವಿದ್ಯಾರ್ಥಿಗಳ ಪಟ್ಟಿಗಳನ್ನು ಪ್ರವೇಶ ಪ್ರಕ್ರಿಯೆ ಮುಗಿದ ನಂತರ ದೃಢೀಕರಿಸಿ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಕಳುಹಿಸಿಕೊಡಬೇಕು.

ಕಾಲೇಜಿನವರು ತೆಗೆದುಕೊಳ್ಳುವ ಶುಲ್ಕವನ್ನು ಸೂಚನಾ ಫಲಕದ ಮೇಲೆ ಕಡ್ಡಾಯವಾಗಿ ಪ್ರಕಟಿಸಬೇಕು. ತೆಗೆದುಕೊಳ್ಳುವ ಶುಲ್ಕಕ್ಕೆ ರಶೀದಿ ಕೊಡಬೇಕು.

(ಕರಡು ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ)

PRINCIPAL
Sri Siddhartha First Grade Coll
TUMAKURU - 572 105.

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು.

ಪ್ರತಿ:-

1. ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಪದವಿ ಶಿಕ್ಷಣವನ್ನು ಬೋಧಿಸುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ.
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಆಪ್ತ ಶಾಖೆಗೆ.
5. ಹೆಚ್ಚುವರಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಆಪ್ತ ಶಾಖೆಗೆ.
6. ಜಂಟಿ ನಿರ್ದೇಶಕರು (ಶೈಕ್ಷಣಿಕ ವಿಭಾಗ) ಕಾಲೇಜು ಶಿಕ್ಷಣ ಇಲಾಖೆ, ಆಪ್ತ ಶಾಖೆಗೆ.
7. ಕಛೇರಿ ಪ್ರತಿ

Scanned with CamScanner

# Government of Karnataka

**No. DCE: 209: : Admin. 2002-03**

**Commissioner Office, Collegiate Education**
**Bangalore-1, Date : 09-01-2003**

# Circular

**Sub: To bring transparency during the admission of first year degree.**

Karnataka Education Service based on the Supreme Court judgment, to bring more transparency, with a good intention, the following guidelines are prepared to implement from 2003-2004.

Display the available admission on notice board/ website prior to the beginning of admissions. Roaster must be followed. Various sections in the groups have to be mentioned. The combinations must be approved by the University.

| **Category** | **% of Reservation** |
|---|---|
| General Merit (GM) | 50 |
| Schedule Caste (SC) | 15 |
| Schedule Tribes (ST) | 03 |
| Cat- I | 04 |
| 2A | 15 |
| 2B | 04 |
| 3A | 04 |
| 3B | 05 |

1. The combinations taught in the college must be as per the syllabus, without Government permission no new subject must be introduced in Government colleges. In order to create additional workload medium wise classes should not be started without the prior written permission from the department.

2. The calendar of events for admission from the concerned university must be followed and same must be displayed for the knowledge of I degree students and their parents.

3. Applications for the I degree students must be issued offer 3 days of the announcement of PUC results. Last date to receive the filled in application must be announced. There must be separate counters for admissions at least 4 hours per day the counters must be opened.

4. The details of the applications issued combination wise must be maintained and the data must be sent to the office regional joint director by the first week of July.

PRINCIPAL
Sri Siddhartha First Grade College

Scanned with CamScanner

5. The students have to be given receipts for the applications received. The selected list of the students has to be announced. The students who don't deserve the admission, the rejection list has to be displayed.

Method of distributing admission.

5. A. All the admissions must be on the basis of merit and according to the roaster system.

B. 20% of the seats may be filled in by grant-in-aid private colleges. Roaster must be followed.

C. Regarding minorities colleges, they are permitted to take 50% of the admissions from their own caste for the remaining 50% roaster must be followed.

Even after the end of the calendar of events the admissions are there they may be permitted upto the last date decided by the University.

Roaster distribution;

1. In co-education 50% admission have to be reserved for girls as per the rule 14(6).
2. 05% admission to be reserved for differently abled persons as per 1995 para 39
3. Scheduled caste/scheduled tribes/obc 1, 2A, 2B, 3A, 3B, reservation as per 14(5) must be followed.
4. For any reason general admissions should not be filled until the reservation applications exhaust.

Short list according to merit.

At first merit list to be made to the reservation candidates. Later the roaster must be followed in different groups. Based on the marks the candidates scored in PIUC the list must be prepared. The college may display I & II and third list. I, II and III list must be announced periodically with a gap of 5 days and 3 days to pay the fee. For any reason no students who has not been enlisted should be admitted to I degree.

In every list the marks scored by the students in PUC must be entered. Cut of point must be displayed in the notice board.

The selected lists have to be sent to J D Office.

The fee details must be displayed on the notice board.

PRINCIPAL
Sri Siddhartha First Grade College

Scanned with CamScanner